**ಮಿಸ್ . ನಂಃ 3/2023**
**ಪಿ.ಡಬ್ಲ್ಯೂಃ 1, ಶಿವಶರಣಪ್ಪಾ**

ದಿನಾಂಕ :**20-02-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು: :- ಶ್ರೀ ಎಲ್. ಎಚ್. ಕೆ. ವಕೀಲರಿಂದ :

ಜೀವಣಗಿ ಇಂದ ಕೊಡದೂರ ನಡುವೆ 20 ಕಿ.ಮೀ. ಅಂತರ ಇದೆ ಎಂದರೆ ಸರಿ. ಪ್ರತಿವಾದಿ ಸಬಿನಾ ಇವರ ತಂದೆ ತಾಯಿ ಜೀವಣಗಿ ಗ್ರಾಮದವರು ಎಂದರೆ ಸರಿ. ಅವರಿಗೂ ನಮಗೂ ಒಳ್ಳೆಯ ಪರಿಚಯ ಹಾಗೂ ಸಂಬಂಧ ಇತ್ತು. ಸಬಿನಾ ಇವರ ಅಣ್ಣ ತಮ್ಮಂದಿರು ಜೀವಣಗಿಯಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ಅವರ ಪರಿಚಯ ಇದೆ ಅದರೆ ಹೆಸರು ಗೊತ್ತಿಲ್ಲಾ ಎಂದು ಹೇಳುತ್ತಾರೆ. ನಮ್ಮ ಊರಿನ ಜನ ಜೀವಣಗಿಯಿಂದ ಕೊಡದೂರಿಗೆ, ಕೊಡದೂರ ಇಂದ ಜೀವಣಗಿಗೆ ಯಾರು ಓಡಾಡುವುದಿಲ್ಲಾ. ನಾನು ಹೊಲ ನೋಡಲು ಹೋಗಿದ್ದೆ ಎಂದು ಹೇಳುತ್ತಾರೆ. ಕೊಡದೂರಿನಲ್ಲಿ ನಮಗೆ ಬೇರೆ ಯಾವುದು ಜಮೀನು ಇಲ್ಲಾ. ಜೀವಣಗಿಯಲ್ಲಿ ನಮಗೆ 3 ಎಕರೆ ಜಮೀನು ಇರುತ್ತದೆ. ನಾವು ಪಾಲಿಗೆ ಹಚ್ಚಿ ವ್ಯವಸಾಯ ಮಾಡುತ್ತೇವೆ.

ಕೊಡದೂರಿನಲ್ಲಿ ನಮ್ಮ ಸಂಬಂಧಿಕರು, ಪರಿಚಯದವರು ಯಾರು ಇಲ್ಲಾ. ಮೃತ ಸಬಿನಾ ಇವರು ಸಾಯುವ ಮೊದಲು ಎಷ್ಟು ವರ್ಷದಿಂದ ಪರಿಚಯ ಎಂದರೆ ಸಾಕ್ಷಿ ಅವರ ಮದುವೆಯನ್ನು ನಾನೇ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಚಿಕ್ಕವಳಿನಿಂದ ಪರಿಚಯ ಇಲ್ಲಾ ಎಂದು ಹೇಳುತ್ತಾರೆ. ನಾನು ಈ ದಾವೆ ಹಾಕಿದಾಗ ಸಬಿನಾ ಅವರ ವಿಳಾಸ ಕೊಡದೂರ ಗ್ರಾಮ ಎಂದು ತೋರಿಸಿದ್ದು ಅದು ಸರಿ ಇರುತ್ತದೆ. ದಾವೆ ಹಾಕುವ ಮೊದಲು ನೋಟಿಸ ನೀಡಿದಾಗಲೂ ಸಹ ಇದೇ ವಿಳಾಸಕ್ಕೆ ಕೊಟ್ಟಿದ್ದೆ ಎಂದು ಹೇಳುತ್ತಾರೆ. ಆ ನೋಟಿಸನ್ನು ಸಬಿನಾ ಇವರು ತೆಗೆದುಕೊಂಡಿಲ್ಲಾ, ಕೋರ್ಟಗೂ ಬಂದಿಲ್ಲಾ ಎಂದು ಹೇಳುತ್ತಾರೆ. ಸದರಿ ನೋಟಿಸನ್ನು ಅವರು ಸ್ವೀಕರಿಸಿಲ್ಲಾ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ದಾವೆ ತೀರ್ಪು ಆದ ನಂತರ ಇ.ಪಿ. ನಂ: 48/2021 ಅರ್ಜಿ ಹಾಕಿದಾಗ ಸಬಿನಾ ಇವರು ತೀರಿಕೊಂಡ ಬಗ್ಗೆ ಗೊತ್ತಾಯಿತಾ ಎಂದು ಕೇಳಿದಕ್ಕೆ ಸಾಕ್ಷಿ ಅಲ್ಲಾ ಅವರ ಮೈದುನ ಬಂದು ಅರ್ಜಿ ಹಾಕಿದ ನಂತರ ಗೊತ್ತಾಯಿತು ಎಂದು ಹೇಳುತ್ತಾರೆ. ನಾನು ಓಎಸ್. ನಂ: 51/2018 ದಾವೆ ಹಾಕಿದ ನಂತರ ದಿ: 16-03-2020 ರಂದು ಸಬಿನಾ ಇವರು ತೀರಿಕೊಂಡ ವಿಚಾರ ನನಗೆ ಗೊತ್ತಿತ್ತು ಎಂದರೆ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ.

ಮೃತ ಸಬಿನಾ ಇವರಿಗೆ ದೌಲತಸಾಬ ಒಬ್ಬನೇ ಸಂಬಂಧಿಕನಾ ಎಂದು ಕೇಳಿದಕ್ಕೆ ಸಾಕ್ಷಿ ನನಗೆ ಅವರು ಒಬ್ಬರೇ ಗೊತ್ತು ಎಂದು ಹೇಳುತ್ತಾರೆ. ಇ.ಪಿ. 48/2021 ಪ್ರಕರಣದಲ್ಲಿ ದಿ: 23-09-2022 ರಲ್ಲಿ ದೌಲತಸಾಬ ಹಾಜರಾಗಿ ಸಬಿನಾ

**ಮಿಸ್ . ನಂಃ 3/2023**
**ಪಿ.ಡಬ್ಲ್ಯೂಃ 1, ಶಿವಶರಣಪ್ಪಾ**

ಮೃಟಪಟ್ಟಿದಾರೆ ಎಂದು ತಿಳಿಸಿದಾಗಲೂ ಸಹ ನಾವು ಏನು ಕ್ರಮ ಜರುಗಿಸಿಲ್ಲಾ ಎಂದರೆ ಸರಿಯಲ್ಲ ಇ.ಪಿ.48/2021 -ಪ್ರಕರಣ ಹಾಕಿ ಅದರಲ್ಲಿ ನೋಟಿಸ ಹೋದ ನಂತರ ದೌಲತಸಾಬ ಬಂದು ಹೇಳುವವರೆಗೂ ಸಬಿನಾ ಮೃತ ಪಟ್ಟ ವಿಚಾರ ನನಗೆ ಗೊತ್ತೇ ಇರಲಿಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2020 ರಲ್ಲಿ ಕೋವಿಡ್ ಅಲೆ ಇದ್ದುದರಿಂದ ಅವರು ಮೃಟ ಪಟ್ಟ ವಿಚಾರ ಗೊತ್ತಾಗಲಿಲ್ಲಾ ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಸತ್ಯ ವನ್ನು ಮರೆ ಮಾಚಿ ಡಿಕ್ರಿ ಪಡೆದಿದ್ದೆ ಎಂದರೆ ಸರಿಯಲ್ಲ. ಈಗ ನಾನು ಹಾಕಿರುವ ಅರ್ಜಿ ಕಾನೂನು ಪ್ರಕಾರ ಉರ್ಜಿತ ಅಲ್ಲಾ ಎನ್ನುವುದು ಸರಿಯಲ್ಲ.

ಮರ ವಿಚಾರಣೆ : ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.